ಶ್ರೀ ಕೆ. ಹರ್ಷಕುಮಾರ್ ಗೌಡ : ಸರ್ಕಾರೀ ಒಡೆತನದ ಶಾಲೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ನೀಡಲಾಗುತ್ತಿದೆ. ಎಂದು ಉತ್ತರಿಸಿದ್ದಾರೆ. ನಾನು ಮತ್ತೆ ಕೇಳುತ್ತಿದ್ದೇನೆ. ರಾಜ್ಯದ ಭಾಷೆ ಕನ್ನಡ ಎಂದು ನಾವು ಒಪ್ಪಿಕೊಂಡಿದ್ದೇವೆ. ಆ ನೀತಿಗೆ ಬದ್ಧವಾಗಿದೆಯೇ? ನನ್ನ ಒಂದು ಸ್ಪಷ್ಟವಾದ ಪ್ರಶ್ನೆ ಎಂದರೆ ಒಂದರಿಂದ ಏಳನೆಯ ತರಗತಿಯ ತನಕ ಕರ್ನಾಟಕ ರಾಜ್ಯದಲ್ಲಿ ಯಾವುದೇ ಸ್ಕೂಲ್ ಗಳಲ್ಲಿ ಕೂಡ ಇಂಗ್ಲೀಷ್ ಮಾಧ್ಯಮವನ್ನು ಕಲಿಸುತ್ತಾ ಇಲ್ಲ. ಕನಿಷ್ಟ ಒಂದೆರಡು ಸ್ಕೂಲುಗಳಲ್ಲಿ ಮಾತ್ರ ಕನ್ನಡದಲ್ಲಿ ಕಲಿಸುತ್ತಾ ಇರಬಹುದು. ಆದರೆ ಖಾಸಗೀ ಶಾಲೆಗಳಲ್ಲಿ ಇಂಗ್ಲೀಷ್ ಮಾರಾಟದ ವ್ಯವಸ್ಥೆ ನಡೆಯುತ್ತಾ ಇದೆ. ಈ ದ್ವಂದ್ವ ಏಕೆ ಬೇಕು?

ಶ್ರೀ ಜಿ. ಪುಟ್ಟಸ್ವಾಮಿಗೌಡ : (ಶಿಕ್ಷಣ ಸಚಿವರ ಪರವಾಗಿ) ನಮ್ಮ ರಾಜ್ಯದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮ. ಆದರಲ್ಲಿ ಯಾವ ದ್ವಂದ್ವ ನೀತಿಯೂ ಇಲ್ಲ. ಆದರೆ ಕನ್ನಡೇತರ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿ ಎಂದು ಹೇಳಿ ಕೆಲವೊಂದು ಕಡೆ ಇಂಗ್ಲೀಷನ್ನು ತೆಗೆದಿರತಕ್ಕದ್ದು ನಮ್ಮಲ್ಲಿ ಇದೆ. ಆದರೆ ಖಾಸಗೀಯವರು ಇಂಗ್ಲೀಷ್ ಮಾಧ್ಯಮದ ವ್ಯಾಪಾರ ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿಯೇ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದು ಅಧಿಕೃತವಾಗಿ ಹೇಳಬೇಕಾದರೆ, ಇಲ್ಲ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಕೂಡಲೇ - ತೀರ್ಮಾನ ತೆಗೆದುಕೊಳ್ಳಲಿದೆ ಎನ್ನತಕ್ಕ ಮಾತನ್ನು ಸನ್ಮಿತ್ರರಿಗೆ ಹೇಳಬಯಸುತ್ತೇನೆ.

ಉರ್ದು ಮಾಧ್ಯಮದ ಪ್ರಾಥಮಿಕ ಪ್ರೌಢಶಾಲೆ ಮತ್ತು ಕಾಲೇಜುಗಳಿಗೆ ಅನುಮತಿ.

3294 - ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *1988-89 ಮತ್ತು 1989-90 ರಲ್ಲಿ ಉರ್ದು ಮಾಧ್ಯಮದ ಎಷ್ಟು ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ? (ಜಿಲ್ಲಾವಾರು ಅಂಕಿ ಅಂಶನೀಡುವುದು)*

ಆ) *ಉರ್ದು ಮಾಧ್ಯಮದ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ ಹಾಗೂ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಬಂದ ಅರ್ಜಿಗಳಲ್ಲಿ ಸರ್ಕಾರದಿಂದ ಇತ್ಯರ್ಥವಾಗದೆ ಉಳಿದಿರುವುದು ಎಷ್ಟು? (ಜಿಲ್ಲಾವಾರು ಅಂಕಿ ಅಂಶ ನೀಡುವುದು)*

ಶಿಕ್ಷಣ ಸಚಿವರ ಪರವಾಗಿ ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರಾಥಮಿಕ ಶಾಲೆಗಳು - 9

ಮಾಧ್ಯಮಿಕ ಶಾಲೆಗಳು - ಇಲ್ಲ

ಪ್ರೌಢ ಶಾಲೆಗಳು - 10

ಸಂಯುಕ್ತ ಮತ್ತು ಸ್ವತಂತ್ರ ಪದವಿಪೂರ್ವ ಕಾಲೇಜುಗಳು - ಇಲ್ಲ

ಪ್ರಥಮ ದರ್ಜೆ ಕಾಲೇಜುಗಳು - ಇಲ್ಲ

(ಜಿಲ್ಲಾವಾರು ಅಂಕಿ ಅಂಶ ಪಟ್ಟಿ ಲಗತ್ತಿಸಿದೆ)

ಆ) ಉರ್ದು ಮಾಧ್ಯಮಕ್ಕೆ ಸಂಬಂಧ ಪಟ್ಟಂತೆ ಯಾವ ಅರ್ಜಿಯೂ ಬಂದಿರುವುದಿಲ್ಲ.

ಮಾನ್ಯತೆ ಪಡೆದ ಉರ್ದು ಶಾಲೆಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಗಳು	1988-89				1989-90			
		ಪ್ರಾಥಮಿಕ ಶಾಲೆ	ಮಾಧ್ಯಮಿಕ ಶಾಲೆ	ಪ್ರೌಢಶಾಲೆ	ಕಿರಿಯ ಕಾಲೇಜು	ಪ್ರಾಥಮಿಕ ಶಾಲೆ	ಮಾಧ್ಯಮಿಕ ಶಾಲೆ	ಪ್ರೌಢಶಾಲೆ	ಕಿರಿಯ ಕಾಲೇಜು
1.	ಬೆಂಗಳೂರು ಗ್ರಾಮಾಂತರ	-	-	-	-	-	-	-	-
2.	ತುಮಕೂರು	-	-	-	-	-	-	-	-
3.	ಚಿತ್ರದುರ್ಗ	-	-	-	-	-	-	-	-
4.	ಶಿವಮೊಗ್ಗ	-	-	3	-	-	-	-	-
5	ಕೋಲಾರ	-	-	-	-	-	-	-	-
6.	ಗುಲ್ಬರ್ಗಾ	-	-	-	-	-	-	-	-
7.	ರಾಯಚೂರುಖಿ	-	-	-	-	-	-	-	-
8.	ಬಳ್ಳಾರಿ	-	-	-	-	-	-	-	-
9.	ಬೀದರ್	6	-	6	-	-	-	-	-
10.	ಮೈಸೂರು	-	-	-	-	-	-	-	-
11.	ಮಂಡ್ಯ	-	-	-	-	-	-	-	-
12.	ದಕ್ಷಿಣ ಕನ್ನಡ	-	-	-	-	-	-	-	-
13.	ಚಿಕ್ಕಮಗಳೂರು	-	-	-	-	-	-	-	-
14.	ಹಾಸನ	-	-	-	-	-	-	-	-
15.	ಮಡಿಕೇರಿ	-	-	-	-	-	-	-	-
16.	ಬೆಳಗಾಂ	-	-	-	-	-	-	-	-
17.	ಬಿಜಾಪುರ	-	-	-	-	-	-	1	-
18.	ಧಾರವಾಡ	-	-	-	-	-	-	-	-
19.	ಉತ್ತರ ಕನ್ನಡ	3	-	-	-	-	-	-	-
	ಒಟ್ಟು	9	-	9	-	-	-	1	-

ಶ್ರೀ ಎ.ಎಂ. ಹಿಂಡಸಗೇರಿ : ಮೊದಲಿನೆಯ ಪ್ರಶ್ನೆಗೆ89 ರಿಂದ 90 ರವರೆಗೆ ಬರೀ 9 ಎಂದು ಹೇಳಿದ್ದಾರೆ, ಪ್ರೈಮರಿ ಮಿಡಲ್ ಮತ್ತು ಹೈಸ್ಕೂಲ್ 10 ಅನ್ನುತ್ತಾರೆ ಮತ್ತು ಎರಡನೇ ಪ್ರಶ್ನೆಗೆ "No application are pending".

ಎನ್ನುತ್ತಾರೆ, ಇಡೀ ರಾಜ್ಯದಲ್ಲಿ ಉರ್ದು ಶಾಲೆಗೆ ಪ್ರೈಮರಿಯಾಗಲಿ ಮಿಡಲ್ ಆಗಲಿ, ಯಾವುದೂ ಅಪ್ಲಿಕೇಶನ್ನು ಬಂದಿಲ್ಲ. ಈಗ ಜಿಲ್ಲಾಪರಿಷತ್‌ಬಂದ ನಂತರ ನಾವು ಅಪ್ಲಿಕೇಶನ್ಸ್ ಕೊಡ್ತೇವೆ ಅಲ್ಲಿ ದಿಲೇ ಮಾಡಿಬಿಡ್ತಾರೆ ಸರ್ಕಾರಕ್ಕೆ ಸರಿಯಾಗಿ ಅಪ್ಲಿಕೇಶನೂ ಮುಟ್ಟೋದಿಲ್ಲ ದಯವಿಟ್ಟು ತಾವು ಮರುಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೊಸದಾಗಿ ಕಂಪೋ ಕಾಲೇಜಗಳನ್ನು ಮೈನಾರಿಟೀಸ್‌ಗಾಗಲಿ ಮೋಟಮ್ಮನವರು ಕೇಳಿದಂತೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳವರೆಗೆ ಏನು ಕೊಟ್ಟಿದ್ದಾರೆ ಅವುಗಳಿಗೆ ಗ್ರಾಂಟ್ ಇನ್ ಏಡ್ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಗ್ರಾಂಟ್ ಕೊಡದಿದ್ದರೆ ಶಾಲೆಗಳನ್ನು ಹೇಗೆ ನಡೆಸುವುದು? ದಯಮಾಡಿ ಮೈನಾರಿಟೀಸ್ ಮತ್ತು ದಯಮಾಡಿ ಮೈನಾರಿಟೀಸ್ ಮತ್ತು ಮತ್ತು ಎಸ್. ಸಿ. ಎಸ್. ಟಿ. ಶಾಲೆಗಳಿಗೆ ರಿಯಾಯಿತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಅಧ್ಯಕ್ಷರೇ, ಅವರು ಕೇಳಿದ ಪ್ರಶ್ನೆ 88-89 ಮತ್ತು 89-90ರಲ್ಲಿ ಎಷ್ಟು ಉರ್ದು ಮಾಧ್ಯಮಕ್ಕೆ ಸಂಬಂಧಿಸಿದಂತೆ ಅರ್ಜಿ ಪೆಂಡಿಂಗಿವೆ ಎಂದಿದ್ದಾರೆ. ಸರ್ಕಾರದ ಮುಂದೆ ಒಂದೂ ಇಲ್ಲ. ಅಧ್ಯಕ್ಷರೇ ತಮಗೆ ಗೊತ್ತಿರುವಂತೆ ಜಿಲ್ಲಾಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ಮತ್ತು ಪ್ರಾಥಮಿಕ ಮತ್ತು ಪ್ರೌಢಶಾಲೆ ತೆರೆಯಲು ಮೊದಲು ಜಿಲ್ಲಾಪರಿಷತ್‌ನವರು ವರದಿ ಕೊಟ್ಟು ಅರ್ಜಿಗಳನ್ನು ಅವಲೋಕನ ಮಾಡಿ ಸರ್ಕಾರಕ್ಕೆ ಶಿಫಾರಸ್ಸಾಡಬೇಕಾಗುತ್ತದೆ. ಬಹುತೇಕ ಅರ್ಜಿಗಳು ಆ ಮಟ್ಟದಲ್ಲೇ ಇತ್ಯರ್ಥವಾಗೋದರಿಂದ ಸರ್ಕಾರದ ಮುಂದೆ ಯಾವ ಅರ್ಜಿಗಳೂ ಉಳಿದಿಲ್ಲ. ಆದರೆ 91-92ಕ್ಕೆ ತುಮಾಕೂರಿನ ಒಂದು ಸಂಸ್ಥೆ ಅರ್ಜಿಹಾಕಿಕೊಂಡಿದೆ. ಅದು ಪರಿಶೀಲನೆಯಲ್ಲಿದೆ. ಎಸ್.ಸಿ. ಎಸ್.ಟಿ. ಮತ್ತು ಮೈನಾರಿಟೀಸ್‌ಗೆ ಅನುದಾನ ಕೊಡುವ ಬಗ್ಗೆ ಮತ್ತೊಂದು ಮಾತು ಹೇಳಿದರು. ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಶ್ರೀ ಎ.ಎಂ. ಹಿಂಡಸಗೇರಿ : ಉರ್ದು ಮಿಡಿಯಂ ಶಾಲೆಗಳ ಬಗ್ಗೆ ಸರ್ಕಾರ ಅವರಿಗೆ ಆದೇಶ ಕೊಡಬೇಕು, ಶಿಫಾರಸ್ ಮಾಡಿ ತಮ್ಮ ಕಡೆಗೆ ಬರಬೇಕೆಂದು ಯಾವ ತರಹ ಅವರು ರಿಜೆಕ್ಟ್ ಮಾಡಿದರೆಂದು ಸರ್ಕಾರಕ್ಕೆ ಗೊತ್ತಾಗಬೇಕು. ಅಲ್ಲಿ ಅವರು ಕೊಡೋದಿಲ್ಲ ಎಂದು ಹೇಳಿ ಬಿಡ್ತಾರೆ,ಆದ್ದರಿಂದ ಉರ್ದು ಮಿಡಿಯಂ ಶಾಲೆಗೆ ಬಹಳ ತೊಂದರೆಯಾಗ್ತದೆ. ಅವರು ರಿಜೆಕ್ಟ್ ಮಾಡಿದ್ದನ್ನು ತಮಗೆ ಕಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಜಿಲ್ಲಾಪರಿಷತ್ ತನ್ನದೇ ಆದ ಅಧಿಕಾರವನ್ನು ಸರ್ಕಾರ ಈಗಾಗಲೇ ಕೊಟ್ಟಿದೆ. ಆ ಬಗ್ಗೆ ಕಾನೂನು ಚೌಕಟ್ಟಿನಲ್ಲಿ ಅವರು ತೀರ್ಮಾನ ತೆಗೆದುಕೊಳ್ಳಲು ಅವಕಾಶ ಇದೆ. ಅದನ್ನು ಪುನಃ ನಾವು ಹಿಂದಕ್ಕೆ ಪಡೆಯಬೇಕಾದರೆ ಮುಂದೆ ಅಕ್ಟನ್ನು ಮಾಡಿಫಿಕೇಶನ್ ಆಗಬೇಕಾಗುತ್ತದೆ. ಅದು ಸಧ್ಯಕ್ಕೆ ಕಷ್ಟ ಎಂದು ಹೇಳಬಯಸುತ್ತೇನೆ.